ಭಂಗಿ, ಅವನ ಮಾತಿನ ಧಾಟಿ ಎರಡರಲ್ಲೂ ಅಹಂಕಾರ ತುಂಬಿ ತುಳುಕುತ್ತಿತ್ತು.

"ಸಾರ್, ನಾನು ನಿಮ್ಮ ದೊಡ್ಡ ಅಭಿಮಾನಿ. ನಿಮ್ಮ ಎಲ್ಲಾ ಚಿತ್ರಗಳನ್ನು ನೋಡಿದ್ದೇನೆ. ಬಹಳ ಚೆನ್ನಾಗಿ ಬರೆಯುತ್ತೀರಿ ಸರ್..." ಮತ್ತೆ ಅದೇ ನಾಟಕೀಯ ಶೈಲಿಯಲ್ಲಿ ನಗುತ್ತಾ ಹೇಳಿದ ನಾಗರಾಜಯ್ಯ.

"ಸಂತೋಷ. ನನಗೆ ಈಗ ಬರೆಯುವ ಸಮಯ. ಅಲ್ಲದೇ ಯಾರಿಗೋ ಬರಹೇಳಿದ್ದೆ. ಇನ್ನೇನು ಅವರು ಬರುವ ಸಮಯ. ಇದೇ ಕಾರಣಕ್ಕೆ ಬಂದರೆ ದಯವಿಟ್ಟು ಇನ್ನೊಮ್ಮೆ ಬನ್ನಿ" ಧ್ವನಿಯಲ್ಲಿ ಒರಟುತನ ತುಂಬಿತ್ತು.

"ಅಯ್ಯೋ ಅದಕ್ಕಾಗಿ ಬಂದಿಲ್ಲ. ಅದೇ ನಿಮ್ಮ ಶಿಷ್ಯ ಆನಂದರಾಮ್ ಕೊಲೆ ಪ್ರಕರಣದ ವಿಚಾರವಾಗಿ ಮಾತನಾಡಲು ಬಂದೆ" ಎಂದ ಅವನಲ್ಲಿ ಅದೇ ಕಪಟ ನಗು!

ಸೂರ್ಯ ಕಾಮತ್ ಬೆದರಿದ. ಆರು ತಿಂಗಳಿಂದ ಕಾಡುತ್ತಿದ್ದ ಪ್ರಕರಣ ಅದು. ಇನ್ನೇನು ಮುಗಿಯಿತು, ಆ ಕೊಲೆ ಆಪಾದನೆಯಿಂದ ಮುಕ್ತನಾದೆ ಎಂದು ಸಮಾಧಾನದಿಂದಿದ್ದರೆ ಯಾರೋ ಹೊಸ ಇನ್‌ಸ್ಪೆಕ್ಟರ್ ಮತ್ತೆ ವಿಚಾರಣೆಗೆ ಬಂದನಲ್ಲಾ ಎಂಬ ಭಯ ಮನದಲ್ಲಿ ಮೂಡತೊಡಗಿತು. ಭಯ ಮುಖದಲ್ಲಿನ ಬೆವರಾಗಿ ಹೊರಗಡೆ ಕಾಣತೊಡಗಿತು. ಹಣೆಯ ಬೆವರನ್ನು ಒರಸಿಕೊಳ್ಳುತ್ತಾ, "ಅದರ ಇನ್ವೆಸ್ಟಿಗೇಷನ್ ಮುಗಿದಿದೆಯಲ್ಲವಾ? ಮುಂಚೆ ಇದ್ದವ ನನ್ನಮೇಲೆ ಯಾವ ಆಪಾದನೆ ಕೂಡಾ ಇಲ್ಲ ಅಂತಾ ಹೇಳಿದ್ದರೂ ಮತ್ತೇಕೆ?" ಎಂದು ಸ್ವಲ್ಪ ಧೈರ್ಯದಿಂದ ಮಾತಾಡಿದರೂ ಧ್ವನಿಯಲ್ಲಿ ಭಯ ಅಲ್ಲಲ್ಲಿ ಇಣುಕುತ್ತಿತ್ತು.

"ಅಯ್ಯೋ ಭಯ ಪಡಬೇಡಿ ಸಾರ್. ನನಗೆ ರಿಟೈರ್ ಆಗಕ್ಕೆ ಇನ್ನು ಕೆಲವೇ ದಿನ ಇದೆ ಅಂತಾ ಬೆಂಗಳೂರಿಗೆ ವರ್ಗ ಮಾಡಿಸಿಕೊಂಡು ಬಂದೆ. ನಿಮ್ಮ ಕೇಸ್‌ಗೆ ಕ್ಲೋಸಿಂಗ್ ರಿಪೋರ್ಟ್ ಬರೀಬೇಕಿತ್ತು. ಅಷ್ಟರಲ್ಲಿ ಆ ಆನಂದರಾಮ್ ಮನೆ ಕಡೆಯವರು ಮತ್ತೆ ಅದೇನೋ ಕ್ಯಾತೆ ತೆಗೆಯುತ್ತಿದ್ದಾರೆ. ನಮ್ಮ ಸೀನಿಯರ್‌ಗಳು ನಾನು ಅದರ ಕ್ಲೋಸಿಂಗ್ ರಿಪೋರ್ಟ್ ಬರೆದರೆ ಡಾಕ್ಯುಮೆಂಟ್ ಕರೆಕ್ಟಾಗಿ ಇರುತ್ತೆ ಅಂತಾ ನನಗೆ ಕೊಟ್ಟರು. ಮೊದಲೇ ನಾನು ನಿಮ್ಮ ಅಭಿಮಾನಿ. ನಿಮ್ಮನ್ನು ನೋಡಿದ ಹಾಗೂ ಆಯಿತು ಮತ್ತೆ ನನ್ನ ಕ್ಲೋಸಿಂಗ್ ರಿಪೋರ್ಟ್ ಬರೆಯಲು ಕೆಲವು ವಿಚಾರಗಳು ಬೇಕಿದ್ದವು ಹಾಗಾಗಿ ಬಂದೆ."

ಕಾಮತ್ ಸ್ವಲ್ಪ ಸಮಾಧಾನಗೊಂಡ. ಅವನ ಶಿಷ್ಯ ಆನಂದರಾಮ್‌ನ ಸಾವು ಕೊಲೆ ಎಂದು ಶಂಕಿಸಿ ಅವನ ಮೇಲೆ ದೂರು ಕೊಡಲಾಗಿತ್ತು. ಆರು ತಿಂಗಳಿನಿಂದ ಅವನ ಹಿಂದೆ ಪೋಲೀಸರು ಬಿದ್ದಿದ್ದರೂ ಯಾವ ಸಾಕ್ಷ್ಯಾಧಾರವೂ ಸಿಕ್ಕಿರಲಿಲ್ಲ. ಆನಂದರಾಮ್‌ನ ಸಾವನ್ನು ಆತ್ಮಹತ್ಯೆ ಎಂದು ಪರಿಗಣಿಸಲಾಗದಿದ್ದರೂ ಸೂರ್ಯ ಕಾಮತ್‌ನೇ ಕೊಲೆ ಮಾಡಿರಬಹುದು ಎಂಬ ನಿರ್ಧಾರಕ್ಕೆ ಬರಲೂ ಆಧಾರ ಇರಲಿಲ್ಲ.

"ಮಿ. ನಾಗರಾಜಯ್ಯ ನನಗಂತೂ ಈ ಕೇಸ್ ತಲೆನೋವಾಗಿದೆ. ಆವಾಗ ಇವಾಗ ನಿಮ್ಮ ಡಿಪಾರ್ಟ್‌ಮೆಂಟ್‌ನವರು ಬಂದು ನನ್ನ ತಲೆ ತಿನ್ನುವುದು, ನನ್ನ ಸ್ನೇಹಿತರನ್ನು ವಿಚಾರಿಸುವುದು ಇವೆಲ್ಲಾ ಸಾಕಾಗಿದೆ. ಆನಂದರಾಮ್ ನನ್ನ ಬಳಿ ಇದ್ದು ಕೆಲಸ ಕಲಿತ. ನಾಲ್ಕು ವರ್ಷ ನನ್ನ ತಮ್ಮನ ಹಾಗೆ ಸಾಕಿದೆ. ಏನೋ ಅಭಿಪ್ರಾಯ ಭೇದ ಬಂದು ದೂರಾದೆವು. ನಮ್ಮಿಬ್ಬರ ನಡುವೆ ಕೋರ್ಟ್ ಅದು ಇದು ಅಂತೆಲ್ಲ ನಡೆಯಿತು. ಆದರೆ ಅವನನ್ನು ಕೊಲೆ ಮಾಡುವಷ್ಟು ಕಟುಕನಲ್ಲ ನಾನು."

"ನಿಜ ಸಾರ್" ನಿಧಾನವಾಗಿ ಸೋಫಾದ ಮೇಲೆ ಕುಳಿತುಕೊಳ್ಳುತ್ತಾ ಹೇಳಿದ ನಾಗರಾಜಯ್ಯ, "ನಾನು ಕೇಸ್ ಬಗ್ಗೆ ಎಲ್ಲ ಓದಿದೆ. ನಿಮ್ಮ ಮೇಲೆ ಅನುಮಾನ ಪಡಬಹುದೇ ಹೊರತು ಆರೋಪ